ಅಸಲು ದಾವಾ ಸಂಖ್ಯೆ **306/2021** ಪಿ. ಡಬ್ಲ್ಯೂ-**1**

ಸಾಕ್ಷಿಗೆ ದಿನಾಂಕ **12-11-2024** ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಪಿ ಸಿ ಎಂ ವಾದಿಯ ಪರ ವಕೀಲರಿಂದ

ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ, ಅದರಲ್ಲಿರುವ ಅಂಶಗಳನ್ನು ಅರ್ಥೈಸಿಕೊಂಡ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ದಿನಾಂಕ **06-04-2021** ಮತ್ತು **04-10-2021** ರ ವಕೀಲರ ಕಚೇರಿಯ ನೋಟೀಸಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-**1** ಮತ್ತು **2** ಎಂದು ಗುರುತಿಸಲಾಯಿತು. **7** ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**3** ರಿಂದ **9** ಎಂದು ಗುರುತಿಸಲಾಯಿತು. **2** ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**10** ಮತ್ತು **11** ಎಂದು ಗುರುತಿಸಲಾಯಿತು. **5** ವಾಪಸ್ಸಾದ ಅಂಚೆ ಲಕೋಟೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**12** ರಿಂದ **16** ಎಂದು ಗುರುತಿಸಲಾಯಿತು. **5** ಅಂಚೆ ಲಕೋಟೆಯೊಳಗಿರುವ ನೋಟೀಸನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**12**-ಎ ರಿಂದ **16** -ಎ ಎಂದು ಗುರುತಿಸಲಾಯಿತು.

ದಿನಾಂಕ **17-5-2007** ರ ನೊಂದಾಯಿತವಲ್ಲದ ಮತ್ತು ಕೊರತೆ ಮುಂದ್ರಾಂಕ ಶುಲ್ಕ ಹೊಂದಿರುವ ಕ್ರಯದ ಕರಾರು ಪತ್ರ ಹಾಜರು ಪಡಿಸಿದ್ದು ಅದನ್ನು ಕೊರತೆಯ ಮುಂದ್ರಾಂಕ ಶುಲ್ಕವನ್ನು ವಸೂಲಿ ಮಾಡುವ ಸಲುವಾಗಿ ವಶಕ್ಕೆ ಪಡೆಯಲಾಗಿರುತ್ತದೆ

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಸಾ. ಹೇ. ಬಿ. ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇದೆ**

ಅಪರ **ಸಿವಿಲ್ ನ್ಯಾಯಾಧೀಶರು**
**ನಾಗಮಂಗಲ**